# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/45/2015-16 ದಿನಾಂಕ:26.05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

**ವಾದಿ (ಶ್ರೀ/ಶ್ರೀಮತಿ)**

1) ಗುಜ್ಜಲ ಹನುಮಂತಪ್ಪ 2) ಗುಜ್ಜಲ ಚಂದ್ರಪ್ಪ ತಾಯಿ ಲೇಟ್ ಮಾಯವ್ವ 3) ಗುಜ್ಜಲ ತಾಯವ್ವ ಗಂಡ ಲೇಟ್ ಕರಾಟೆಪ್ಪ 4) ಗುಜ್ಜಲ ಮಾಯಪ್ಪ ತಾಯಿ ಲೇಟ್ ಸೋಮವ್ವ, ಎಲ್ಲರ ವಾಸ ಮರಿಯಮ್ಮನಹಳ್ಳಿ ಗ್ರಾಮ, ಹ.ಬೊ.ಹಳ್ಳಿ ತಾಲೂಕು

**ಪ್ರತಿವಾದಿ (ಶ್ರೀ/ಶ್ರೀಮತಿ)**

ಎಂ ಶಿವಕುಮಾರ ತಂದೆ ಎಂ ಬಸಪ್ಪ ವಾಸ ನಾರಾಯಣದೇವರ ಕೆರೆ ಗ್ರಾಮ ಹಗರಿಬೊಮ್ಮನಹಳ್ಳಿ ತಾಲೂಕು.

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ನಾರಾಯಣದೇವರಕೆರೆ | 645/ಇ | 3.02 |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ನಾರಾಯಣದೇವರಕೆರೆ ಗ್ರಾಮದ ಸ.ನಂ.645/ಇ ವಿಸ್ತೀರ್ಣ 3.02 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.19/2015-16, ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:31.03.2016ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ಗುಜ್ಜಲ ಲಕ್ಷ್ಮವ್ವ ಇವರ ಜಮೀನಾಗಿದ್ದು ಸದರಿಯವರು ದಿನಾಂಕ:25.09.2002 ರಂದು ಮರಣ ಹೊಂದಿದ್ದು ಸದರಿಯವರಿಗೆ ಸಂತಾನವಿಲ್ಲದ ಕಾರಣ ಅವರ ಸಹೋದರಿಯಾದ ಗುಜ್ಜಲ ಸೋಮವ್ವ ಇವರ ನೇರ ವಾರಸುದಾರರಾದ ವಾದಿಗಳ ಹೆಸರಿಗೆ ಪೋತಿ ವಾರಸತ್ವದ ಪ್ರಕಾರ ಹಕ್ಕು ಬದಲಾವಣೆ ಮಾಡುವಂತೆ ಕೋರಿರುತ್ತಾರೆ.

ಪ್ರತಿವಾದಿಗಳು ದಿನಾಂಕ:28.01.2016 ರಂದು ಪ್ರಸ್ತುತ ಹಕ್ಕುಬದಾವಣೆಗೆ ತಕರಾರು ಸಲ್ಲಿಸಿದ್ದು ಸದರಿಯವರ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ತನ್ನ ತಾಯಿಯವರಾದ ಮಲ್ಲ ಲಕ್ಷ್ಮವ್ವ ಇವರ ಜಮೀನಾಗಿದ್ದು ಪಹಣಿ ಲೆಕ್ಕ ದಾಖಲೆಯಲ್ಲಿ ಸದರಿಯವರ ಹೆಸರು ಮುಂದುವರೆದಿರುತ್ತದೆ ಸದರಿ ಜಮೀನಿನ ಮೇಲೆ ವಾದಿಗಳಿಗೆ ಯಾವುದೇ ತರಹದ ಹಕ್ಕು ಇರುವುದಿಲ್ಲ ಕಾರಣ ಪ್ರಸ್ತುತ ಹಕ್ಕುಬದಲಾವಣೆಯನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ.

ಕಡತದಲ್ಲಿನ ದಾಖಲೆಗಳ್ನು ಹಾಗೂ ವಾದಿ ಪ್ರತಿಗಳು ಮಂಡಿಸಿದ ವಾದ ವಿವಾದವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನಿಗೆ ಮಲ್ಲ ಲಕ್ಷ್ಮವ್ವ ಇವರು ಮೂಲ ಪಟ್ಟಾದಾರರಾಗಿರುವುದು ಕಂಡುಬಂದಿರುತ್ತದೆ.
2. ವಾದಿಗಳು ತಮ್ಮ ಮನವಿಯೊಂದಿಗೆ ಸಲ್ಲಿಸಿದ ವಂಶ ವೃಕ್ಷವನ್ನು ಪರಿಶೀಲಿಸಲಾಗಿ ಗುಜ್ಜಲ ಲಕ್ಷ್ಮವ್ವ ಇವರು ಗುಜ್ಜಲ ಕುಲ್ಲಭೀಮಪ್ಪ ಇವರ ಮಗಳಾಗಿದ್ದು ಸದರಿಯವರು ಮರಣಹೊಂದಿರುವುದಾಗಿ ಹಾಗೂ ಸದರಿಯವರಿಗೆ ಸಂತಾನವಿಲ್ಲವೆಂದು ಕಂಡುಬಂದಿರುತ್ತದೆ.
3. ಪ್ರತಿವಾದಿಗಳು ಸಲ್ಲಿಸಿದ ಪಡಿತರ ಚೀಟಿಯ ಪ್ರತಿಯನ್ನು ಪರಿಶೀಲಿಸಲಾಗಿ ಎಂ ಲಕ್ಷ್ಮಿದೇವಿ ಎಂದು ಹೆಸರು ನಮೂದು ಇರುವುದು ಕಂಡುಬಂದಿರುತ್ತದೆ.
4. 1968 ರಿಂದ ಕೈ ಬರಹ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಲಾಗಿ ಪಟ್ಟಾದಾರರ ಕಾಲಂನಲ್ಲಿ ಮಲ್ಲ ಲಕ್ಷ್ಮವ್ವ ಎಂದು ಹೆಸರು ನಮೂದು ಇದ್ದು ಚಾಲ್ತಿ ಗಣಕೀಕೃತ ಪಹಣಿಯಲ್ಲಿಯೂ ಮುಂದುವರೆದಿರುವುದು ಕಂಡುಬಂದಿರುತ್ತದೆ.
5. ವಾದಿಗಳು ಸಲ್ಲಿಸಿದ ಮರಣ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಮರಣ ಹೊಂದಿದವರ ಹೆಸರು ಗುಜ್ಜಲ ಲಕ್ಷ್ಮವ್ವ ಎಂದು ನಮೂದು ಇದ್ದು ಸದರಿಯವರ ತಂದೆಯ ಹೆಸರು ಭೀಮಪ್ಪ ಎಂದು ನಮೂದು ಇರುತ್ತದೆ ಇದರಿಂದಾಗಿ ವಂಶ ವೃಕ್ಷದ ಮಾಹಿತಿಗೂ ಮರಣ ಪ್ರಮಾಣ ಪತ್ರದಲ್ಲಿನ ಮಾಹಿತಿಗೂ ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ವಾದಿಗಳು ಸಲ್ಲಿಸಿದ ದಾಖಲಾತಿಗಳಾದ ಪಹಣಿ ಮತ್ತು ಮರಣ ಪ್ರಮಾಣ ಪತ್ರದಲ್ಲಿನ ಮಾಹಿತಿಗೂ ಹಾಗೂ ಇತರೆ ದಾಖಲೆಗಳಲ್ಲಿನ ಮಾಹಿತಿಗಳಿಗೂ ವ್ಯತ್ಯಾಸವಿದ್ದುದರಿಂದ ಹಾಗೂ ಪ್ರಸ್ತುತ ಜಮೀನಿನ ವಾರಸತ್ವದ ಬಗ್ಗೆ ತೀರ್ಮಾನಿಸಲು ಈ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಬಹುದಾಗಿರುವುದರಿಂದ ಈ ಕೆಳಕಂಡಂತೆ.

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ನಾರಾಯಣದೇವರಕೆರೆ ಗ್ರಾಮದ ಸ.ನಂ.645/ಇ ವಿಸ್ತೀರ್ಣ 3.02 ಎಕರೆ ಜಮೀನಿಗೆ ಸಂಬಂಧಿಸಿದಂತೆ ಉಭಯರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 26.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

26/05

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.

Office of the Deputy Tahsildar

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.